**ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು ಮತ್ತು ಜೆಎಂಎಫ್‌ಸಿ ನ್ಯಾಯಾಲಯ**
**ಕೆ.ಆರ್.ನಗರ**

**ಒ.ಎಸ್.156/2017**

**ಪಿಡಬ್ಲ್ಯೂ-1**

**ದಿನಾಂಕ 28-02-2020 ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು. ಮುಖ್ಯ ವಿಚಾರಣೆ ಶ್ರೀ. ಟಿ ಜಿ ವಕೀಲರಿಂದ ವಾದಿ ಪರ ವಕೀಲರುಃ**

ನನ್ನ ಸಾಕ್ಷಿ ಮುಖ್ಯ ವಿಚಾರಣೆಯನ್ನು ಪ್ರಮಾಣ ಪತ್ರದ ಮೂಲಕ ಸಲ್ಲಿಸಿದ್ದು ಅದರಲ್ಲಿ ಹೇಳಿರುವ ಸಂಗತಿಗಳು ನನಗೆ ತಿಳಿದಿದ್ದು ಹಾಗೂ ಅವು ಸತ್ಯವಾಗಿರುತ್ತವೆ.

ದಿಃ03.02.1960 ರಂದು 1ನೇ ವಾದಿಯ ತಂದೆ ದೇವನಾಯಕ ಹಾಗೂ ಚೌಡಮ್ಮ ಇವರಿಂದ ದಾವಾ ಆಸ್ತಿಯ ಒಂದು ಭಾಗವನ್ನು ಕ್ರಯಕ್ಕೆ ಪಡೆದ ನೋಂದಾಯಿತ ಕ್ರಯಪತ್ರದ ಮೂಲ ದಾಖಲೆಯನ್ನು ನಿಪಿ 1 ಎಂದು, ದಿಃ18.05.1961 ರಂದು 1ನೇ ವಾದಿ ಇವರ ತಂದೆ ಮಂಚನಾಯಕ ಅಲಿಯಾಸ್ ಅಜ್ಜನಾಯಕ ಇವರಿಂದ ದಾವಾ ಆಸ್ತಿಯ ಇನ್ನೊಂದು ಭಾಗವನ್ನು ಕ್ರಯಕ್ಕೆ ಪಡೆದ ನೋಂದಾಯಿತ ಕ್ರಯಪತ್ರದ ಮೂಲ ದಾಖಲೆಯನ್ನು ನಿಪಿ 2 ಎಂದು, ವಂಶವೃಕ್ಷವನ್ನು ನಿಪಿ 3 ಎಂದು, 6 ಆಸ್ತಿ ತೆರಿಗೆ ರಿಜಿಸ್ಟರ್‌ನ ದೃಡೀಕೃತ ಪ್ರತಿಗಳನ್ನು ನಿಪಿ 4 ರಿಂದ 9 ಎಂದು, ನನ್ನ ತಾಯಿಯ ಮರಣ ಪ್ರಮಾಣ ಪತ್ರದ ದೃಡೀಕೃತ ದಾಖಲೆಯನ್ನು ನಿಪಿ 10 ಎಂದು, ದಿಃ26.12.2016 ರಂದು ಪ್ರತಿವಾದಿ ಇವರಿಗೆ ಕಳುಹಿಸಿದ ನೋಟಿಸಿನ ಕಛೇರಿ ಪ್ರತಿಯನ್ನು ನಿಪಿ 11 ಎಂದು, 2 ಅಂಚೇ ಸ್ವೀಕೃತಿಗಳನ್ನು ಹಾಗೂ 2 ಅಂಚೇ ರಶೀದಿಗಳನ್ನು ಕ್ರಮವಾಗಿ ನಿಪಿ 12 ರಿಂದ 15 ಎಂದು ಗುರುತಿಸಲಾಯಿತು.

ಈ ಹಂತದಲ್ಲಿ ಪ್ರತಿವಾದಿಗಳು ಪ್ರತಿವಾದ ಪತ್ರವನ್ನು ಸಲ್ಲಿಸದ ಕಾರಣ ಪಾಟೀ ಸವಾಲು ಇಲ್ಲ ಎಂದು ತೆಗೆದುಕೊಳ್ಳಲಾಯಿತು.

ಮರುವಿಚಾರಣೆ ಇರುವುದಿಲ್ಲ.

(ನನ್ನ ಉಕ್ತ ಲೇಖನದ ಮೇರೆಗೆ ಬಹಿರಂಗ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಿಸಲಾಯಿತು.)

ಓ ಹೇ ಕೇ ಸ ಇದೆ ಎಂ

(ಗಾಯತ್ರಿ)
ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು,
ಮತ್ತು ಪ್ರದನ್ಯಾದಂ., ಕೆ.ಆರ್.ನಗರ